## **ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಮಗಳೂರು**

**ಸೆಷನ್ಸ್ ಕೇಸ್ ನಂ.142/2018**

ಫಿರ್ಯಾದುದಾರರು ರಾಜ್ಯದ ಪರವಾಗಿ ಅಜ್ಜಂಪುರ ಪೋಲೀಸರು

ವಿರುದ್ಧ

ಆರೋಪಿತರು ಜಿಲಾನಿ ಮತ್ತು ಇತರರು

**ದೋಷಾರೋಪಣೆ**

ಚಿಕ್ಕಮಗಳೂರಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಉಮೇಶ್ ಎಂ. ಅಡಿಗ, ಬಿ.ಕಾಂ., ಎಲ್.ಎಲ್.ಬಿ.( ಸ್ಪೆಷಲ್), ಆದ ನಾನು

**ಆ 1** ಜಿಲಾನಿ ಯಾನೇ ಜಿಲಾನಿ ನೂರ್ ಅಹಮದ್ ಗೌಸ್ ಕಂಡವಾಡಿ ಬಿನ್ ನೂರ್ ಅಹಮದ್ ಗೌಸ್ ಕಂಡವಾಡಿ, ಸುಮಾರು 20 ವರ್ಷ , ಡ್ರೈವರ್ ವಾಸಃ ಖಾದರ್ ಭಾಗ್ ಓಣಿ ಸವಣೂರ ಟೌನ್ , ಹಾವೇರಿ ಜಿಲ್ಲೆ - (case split up)

**ಆ 2** ಗಣೇಶ ಬಿನ್ ಮಾಂತಯ್ಯ , ವಯಸ್ಸು 20 ವರ್ಷ , ಡ್ರೈವರ್ , ವರಕೇರಿ ಓಣಿ , ಸವಣೂರ ಟೌನ್ , ಹಾವೇರಿ ಜಿಲ್ಲೆ , ಹಾಲಿ ಮೀನಾಕ್ಷಿ ಮಹಲ, ಬನ್ನೇರಘಟ್ಟ ರಸ್ತೆ , ಹುಳಿಮಾವು , ಬೆಂಗಳೂರು.

**ಆ 3** ಜಾವಿದ್ ಯಾನೆ ಸೈಯದ್ ಜಾವಿದ್ ಬೆಂತೂರ್ ಬಿನ್ ತಾಜುದ್ದೀನ್ , 20 ವರ್ಷ , ಕಾರ್ಪೆಂಟರ್ , ಸರವಿಕೆರೆ, ಕಂಚಿಕಾರ ಓಣಿ , ಹಾನಗಲ್ ಟೌನ್ , ಹಾವೇರಿ ಜಿಲ್ಲೆ (case split up)

**ಆ 4** ಜಾಫರ್ ಬಿನ್ ಮಕ್ಬುಲ್ ಅಹಮದ್ , 23 ವರ್ಷ , ಸೆಂಟ್ರಿಂಗ್ ಕೆಲಸ, ಕಂಚಿಕಾರ ಓಣಿ , ಹಾನಗಲ್ ಟೌನ್ , ಹಾವೇರಿ ಜಿಲ್ಲೆ

**ಆ 5** ಪ್ರವೀಣ ಯಾನೇ ಪಕ್ಯಾ ಬಿನ್ ಮನೋಹರ್ ಸಾತ್ಪತಿ , 27 ವರ್ಷ , ಚಪ್ಪಲಿ ಅಂಗಡಿ ಮಾಲೀಕ , ಇಂದಿರಾ ನಗರ ಸ ಹಿ ಪ್ರಾಥಮಿಕ ಶಾಲೆ ಹಿಂಭಾಗ, ಹಾನಗಲ್ ಟೌನ್ ಹಾವೇರಿ ಜಿಲ್ಲೆ

ಆ6 ಮೌಲಾಲಿ ಯಾನೇ ಮೌಲಾ ಬಿನ್ ಹಯಾತ್ ಸಾಬ್ , 20 ವರ್ಷ , ಬಾರ್ ಬೆಂಡಿಂಗ್ ಕೆಲಸ, ಇಂದಿರಾ ನಗರ , ಸ ಹಿ ಪ್ರಾಥಮಿಕ ಶಾಲೆ ಹಿಂಭಾಗ, ಹಾನಗಲ್ ಟೌನ್ ಹಾವೇರಿ ಜಿಲ್ಲೆ

ತೌಫಿಕ್ ಬಿನ್ ಕ್ವಾಜಾ ಮೊಹಿದ್ದೀನ್ , 21 ವರ್ಷ , ಹಣ್ಣಿನ ವ್ಯಾಪಾರಿ , ಕಂಚಿಕಾರ ಓಣಿ , ಎಂ ಕೆ ನಾಯಕ್ ಚೌಕಿ , ಹಾನಗಲ್ ಟೌನ್ , ಹಾವೇರಿ ಜಿಲ್ಲೆ

ನಿಮ್ಮ ವಿರುದ್ಧ ಹೊರಿಸುವ ದೋಷಾರೋಪಣೆ ಏನೆಂದರೆಃ

ನೀವು ಹಾಗೂ ತಲೆಮರೆಸಿಕೊಂಡ 2 ಮತ್ತು 3 ನೇ ಆರೋಪಿಗಳು ಸೇರಿಕೊಂಡು ಅಪರಾಧ ಮಾಡುವ ಏಕೋದ್ದೇಶದಿಂದ , ನಿಮ್ಮಲ್ಲಿ 2 ನೇ ಆರೋಪಿಗೆ ಬೊಲೆರೋ ಪಿಕಪ್ ವಾಹನವನ್ನು ತೆಗೆದುಕೊಂಡು ಹೋಗಲು 2 ನೇ ಸಾಕ್ಷಿ ಮಹಮದ್ ಖಾದರ್ ಜಿಲಾನಿ ತಿಳಿಸಿದ್ದು , ಹಾಗೂ ತೆಂಗಿನಕಾಯಿಯನ್ನು ಖರೀದಿಸಿ ತೆಗೆದುಕೊಂಡು ಬರುವ ಉದ್ದೇಶದಿಂದ ತನ್ನ ಬಳಿ ರೂಃ 3,25,000-00 ಹಣದ ಬ್ಯಾಗ್ ಮತ್ತು ಮೊಬೈಲ್ ಹೊಂದಿದ್ದು , ನೀನು 2 ನೇ ಆರೋಪಿ ತೆಂಗಿನಕಾಯಿ ಲೋಡ್ ಮಾಡಿಕೊಂಡು ಬರುವುದಕ್ಕೆ 9 ನೇ ಸಾಕ್ಷಿಗೆ ಸೇರಿದ ಕೆಎ 27 ಬಿ 5181 ವಾಹನದಲ್ಲಿ ಸವಣೂರಿನಿಂದ ಅಜ್ಜಂಪುರ ಕಡೆಗೆ ಹೊರಟಿದ್ದು , ನೀನು 2 ನೇ ಆರೋಪಿ ಸದರಿ ವಾಹನ ಎಲ್ಲಿ ಹೋಗುತ್ತಿದೆ ಎಂಬ ಮಾಹಿತಿಯನ್ನು ಉಳಿದ ಆರೋಪಿಗಳಿಗೆ ಮಾಹಿತಿ ನೀಡಿ ದಿನಾಂಕ 27-12-2016 ರ ನಸುಕಿನ 3-15 ಗಂಟೆ ಸಮಯದಲ್ಲಿ , ಅಜ್ಜಂಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಅಮೃತ ಮಹಲ್ ಕಾವಲು ಸಮೀಪ ಉಳಿದ ಆರೋಪಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ನೀನು 2 ನೇ ಆರೋಪಿ ಪಿಕಪ್ ವಾಹನವನ್ನು ನಿಧಾನ ಚಲಾಯಿಸಿ, ಎದುರಿಗೆ ಟವೆರಾ ಕಾರು ಬಂದಿದೆ ಎಂಬ ನೆವದಿಂದ ವ್ಯಾನನ್ನು ನಿಲ್ಲಿಸಿದ್ದು , ಆರೋಪಿ 1 ಹಾಗೂ 3 ರಿಂದ 7 ಕಾರಿನಿಂದ ಕೆಳಗಿಳಿದು ನಿಮ್ಮಲ್ಲಿ 6 ನೇ ಆರೋಪಿ 2 ನೇ ಸಾಕ್ಷಿಗೆ ಕತ್ತಿಯಿಂದ ಹಣೆಗೆ , ಬೆನ್ನಿಗೆ ಹೊಡೆದು ಸಾದಾ ಸ್ವರೂಪದ ಗಾಯವನ್ನು ಉಂಟುಮಾಡಿ, ಆತನಿಗೆ ಜೀವ ಬೆದರಿಕೆ ಹಾಕಿ ಆತನ ಬಳಿ ಇದ್ದ ರೂಃ 3,25,000-00

*ಹಾಗೂ ಒಂದು ಮೊಬೈಲ್ ಫೋನನ್ನು ದರೋಡೆ ಮಾಡಿ , ಸದರಿ ದರೋಡೆಯಿಂದ ಬಂದ ಹಣವನ್ನು ನೀವೆಲ್ಲರೂ ಹಂಚಿಕೊಂಡು ಭಾ.ದಂ.ಸಂ. ಕಲಂ* ***3****95* *ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಮಾಡಿದ್ದೇನೆ.*

*ಮೇಲಿನ ಆರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯದಿಂದ ನಡೆಸಲ್ಪಡುತ್ತದೆ ಎಂದು ಈ ಮೂಲಕ ನಿರ್ದೇಶನ ನೀಡಲಾಗಿದೆ.*

*ದಿನಾಂಕಃ 30 ನೇ ಡಿಸೆಂಬರ್ 2019*

*ಸಹಿ*

*( ಉಮೇಶ್ ಎಂ. ಅಡಿಗ),*
*ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,*
*ಚಿಕ್ಕಮಗಳೂರು.*

*ರಾಃ*